ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1169(1526)
ಮಾನ್ಯ ಸದಸ್ಯರ ಹೆಸರು	ಶ್ರೀ ಸಿದ್ದು ಸಾವದಿ (ಜಮಖಂಡಿ)
ಉತ್ತರಿಸುವ ಸಚಿವರು	ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬೀಜಾಪೂರದಿಂದ ಚಿಕ್ಕಪಡಸಲಗಿವರೆಗೆ ಇರುವ ರಾಜ್ಯ ಹೆದ್ದಾರಿಯ ಅಭಿವೃದ್ಧಿ ಕೆಲಸ ನಿಧಾನಗತಿಯಲ್ಲಿ ಮತ್ತು ಕಳಪೆ ಗುಣಮಟ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬೀಜಾಪೂರದಿಂದ ಚಿಕ್ಕಪಡಸಲಗಿವರೆಗೆ ಇರುವ 48 10 ಕಿಮೀ ರಾಜ್ಯ ಹೆದ್ದಾರಿಯ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಲು 26–4–2007ರವರೆಗೆ ಸಮಯಾವಕಾಶವಿದ್ದು, ಈಗಾಗಲೇ 44 ಕಿಮೀ ಉದ್ದದ ಕಾಮಗಾರಿಯು ಪ್ರಗತಿಯಲ್ಲಿದ್ದು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ ಈ ಕಾಮಗಾರಯ ಗುಣಮಟ್ಟವನ್ನು ನೋಡಿಕೊಳ್ಳಲು ನಿರ್ಮಾಣ ಉಸ್ತುವಾರಿ ಸಲಹೆಗಾರರಾದ ಸ್ಕೆಕ್ ಇಂಟರ್‌ನ್ಯಾಷನಲ್ ಪ್ರೈ ಲಿ ಇವರಿಗೆ ವಹಿಸಿದ್ದು, ಕಾಮಗಾರಿಯ ಗುಣಮಟ್ಟವು ಉತ್ತಮವಿರುತ್ತದೆ

ಆ) ಬಂದಿದ್ದರೆ, ಈ ಬಗ್ಗೆ ಇಲ್ಲಿಯವರೆಗೆ ತೆಗೆದುಕೊಂಡಿರುವ ಕ್ರಮಗಳೇನು,

ಅನ್ವಯಿಸುವುದಿಲ್ಲ

ಇ) ಈ ರಸ್ತೆಯನ್ನು ಅಭಿವೃದ್ಧಿಪಡಿಸುವವರೆಗೆ ಹಳೆಯ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ಕೈಗೊಂಡ ಕ್ರಮಗಳೇನು,

ಈ ರಸ್ತೆಯ ಒಟ್ಟು ಉದ್ದ 48 10 ಕಿಮೀ ಇದ್ದು ಈಗಾಗಲೇ 44 ಕಿಮೀ ಉದ್ದದ ರಸ್ತೆ ಕಾಮಗಾರಿಯ ಪ್ರಗತಿಯಲ್ಲಿದೆ ಉಳಿದ 4 ಕಿಮೀ ರಸ್ತೆಯು ಕೆಳಮಟ್ಟದಲ್ಲಿದ್ದು, ಕಪ್ಪು ಮಣ್ಣಿನಿಂದ ಕೂಡಿರುತ್ತದೆ ಇಲ್ಲಿ ಗುಂಡಿ ಮುಚ್ಚುವಿಕೆಯ ಪೂರ್ಣ ಜವಾಬ್ದಾರಿಯನ್ನು ಗುತ್ತಿಗೆದಾರರಾದ ಪಿ ಬಿ ಎ ಇನ್‌ಪ್ರಾಸ್ಟ್ರಕ್ಚರ್, ಮುಂಬಯಿ ಇವರಿಗೆ ವಹಿಸಲಾಗಿದ್ದು, ರಸ್ತೆಯನ್ನು ಸುಸ್ಥಿತಿಯಲ್ಲಿಡಲು ನಿರ್ದೇಶಿಸಲಾಗಿದೆ ಈ ಭಗದ ರಸ್ತೆಯಲ್ಲಿ ಗುತ್ತಿಗೆ ಕಾಮಗಾರಿಯನ್ನು ಪ್ರಾರಂಬಿಸುವವರೆಗೆ ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಿರುವಂತೆ ಕ್ರ ಕೈಗೊಳ್ಳಲಾಗುವುದು

ಈ) ಹಳೆ ರಸ್ತೆ ಸಂಪೂರ್ಣ ಹಾಳಾಗಿ ಜನರು ಅಡ್ಡಾಡದ ಸ್ಥಿತಿ ಆಗಿದ್ದರೂ ದುರಸ್ತಿ ಕೈಗೊಳ್ಳದೇ ಇರಲು ಕಾರಣಗಳೇನು?

ರಸ್ತೆಯ ನಿರ್ವಹಣಾ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ ರಸ್ತೆಯು ಕಪ್ಪು ಮಣ್ಣಿನಿಂದ ಕೂಡಿದ್ದು, ಕೆಳಮಟ್ಟದಲ್ಲಿರುವುದರಿಂದ ಗುಂಡಿಗಳನ್ನು ಮುಚ್ಚಿದರೂ ಸಹ ಹೆಚ್ಚಿನ ಭಾರದ ವಾಹನಗಳು ಓಡಾಡುತ್ತಿರುವುದರಿಂದ ಪದೇ ಪದೇ ಗುಂಡಿಗಳು ನಿರ್ಮಾಣಗೊಳ್ಳುತ್ತಿವೆ ಈ ಭಾಗದ ಗುತ್ತಿಗೆ ಕಾಮಗಾರಿಯನ್ನು ದಿನಾಂಕ 26–04–2007ರ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ